2017 ಕ.ತೀ.ವ. 1014

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

ಶ್ರೀಮತಿ ರಚನಾ ಗೋಪಿನಾಥ್ ಮತ್ತು ಮತ್ತೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ, ಕಾರ್ಮಿಕ ಇಲಾಖೆ, ಬೆಂಗಳೂರು*

ಭಾರತ ಸಂವಿಧಾನ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿ ಪ್ರಸ್ತುತ ರಿಟ್ ಅರ್ಜಿಯನ್ನು ದಾಖಲಿಸಲಾಗಿದೆ.

ಕರಾರು ಕಾರ್ಮಿಕರ (ನಿಯಂತ್ರಣ ಹಾಗೂ ರದ್ದುಗೊಳಿಸುವ) ಅಧಿನಿಯಮ, 1970– 2(ಇ) ಮತ್ತು 2(i) ಪ್ರಕರಣಗಳು.

ಎಂಎಂಟಿಸಿ–3, ಬೆಂಗಳೂರು (ಸಂಕ್ಷಿಪ್ತವಾಗಿ 'ಮ್ಯಾಜಿಸ್ಟ್ರೇಟ್') ನಲ್ಲಿ ಸಿಸಿ ಸಂ.1961/2012 ಅನ್ನು ದಿನಾಂಕ 21.07.2012 ರಂದು ರಿಟ್ ಅರ್ಜಿಯಲ್ಲಿನ ಅನುಬಂಧ–ಎಫ್ ನಲ್ಲಿರುವಂತೆ ಪ್ರತ್ಯರ್ಜಿದಾರರು ಕ್ರಿಮಿನಲ್ ದೂರನ್ನು ದಾಖಲಿಸಿರುವರು ಮತ್ತು ತತ್ಪರಿಣಾಮವಾಗಿ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಿರುವರು, ಇದರಿಂದಾಗಿ ಭಾದಿತರಾಗಿ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಅಧಿನಿಯಮದ ಅನ್ವಯತೆಗಾಗಿ ಈ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮೇಲಿನ ಉಪಬಂಧಗಳನ್ನು ಒಟ್ಟಾಗಿ ಓದಿಕೊಂಡಾಗ, ಅಧಿನಿಯಮ ಅಡಿಯಲ್ಲಿ ಉದ್ದೇಶಿಸಿದಂತೆ "ಕಾರ್ಯಸಂಸ್ಥೆ" ಯನ್ನು ಸ್ಥಾಪನೆ ಮಾಡಬೇಕಾದುದು ಅತ್ಯಗತ್ಯವಾಗಿದೆ. ಮೊದಲನೆಯದಾಗಿ, ಅರ್ಜಿದಾರರ ಅಸೋಸಿಯೇಷನ್

* ರಿಟ್ ಅರ್ಜಿ ಸಂಖ್ಯೆ.: 18927–18928/2013, (ಎಲ್–ಆರ್ಇಎಸ್),
ದಿನಾಂಕ: 10ನೇ ಜೂನ್, 2016.

ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿದಾಗ. ಅದು, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಕಚೇರಿ ಅಥವಾ ಇಲಾಖೆಯಾಗಿರುವುದಿಲ್ಲ. ಅಸೋಸಿಯೇಷನ್ ಯಾವುದೇ ಸ್ಥಳದಲ್ಲಿ ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಉತ್ಪಾದನೆಯಂತಹ ವೃತ್ತಿಗಳ ಚಟುವಟಿಕೆಗಳನ್ನು ನಡೆಸದಿರುವುದು ಕಂಡುಬರುತ್ತದೆ. ಇದರಿಂದ ಅಸೋಸಿಯೇಷನ್ ಅಧಿನಿಯಮದ 2(ಇ) ಪ್ರಕರಣದಂತೆ 'ಕಾರ್ಯಸಂಸ್ಥೆ' ಯೆಂದು ಅರ್ಥೈಸಲಾಗುವುದಿಲ್ಲ ಎಂಬುದು ಇಲ್ಲಿ ಸುಸ್ಪಷ್ಟವಾಗಿದೆ. ಎರಡನೇಯದಾಗಿ, ಅರ್ಜಿದಾರರ ಅಸೋಸಿಯೇಷನ್ ಐದು ಉದ್ಯೋಗಿಗಳನ್ನು ಮಾತ್ರವೇ ನಿಯೋಜಿಸಿಕೊಂಡಿರುವುದನ್ನು ಅರ್ಜಿದಾರರು ಅದನ್ನು ಈ ಮೊದಲೇ ತಿಳಿಸಿರುತ್ತಾರೆ ಮತ್ತು ಪ್ರತ್ಯರ್ಜಿದಾರರು ದಾಖಲಿಸಿದ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರು ನಿಯೋಜಿತವಾಗಿರುವ ಬಗ್ಗೆ ಅಥವಾ ಕರಾರು ಕಾರ್ಮಿಕರಂತೆ ಮುಂದಿನ ಹನ್ನೆರಡು ತಿಂಗಳಲ್ಲಿನ ಯಾವುದೇ ದಿನದಂದು ನಿಯೋಜಿತವಾಗುವ ಕೆಲಸಗಾರರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಮೂರನೆಯದಾಗಿ, ಅಧಿನಿಯಮದ 2(i) ನೇ ಪ್ರಕರಣದ ಅಡಿಯಲ್ಲಿನ 'ಕೆಲಸಗಾರ'ದ ಅರ್ಥ ವಿವರಣೆಯೊಳಗೆ ಅರ್ಜಿದಾರರ ಅಸೋಸಿಯೇಷನ್‌ನಲ್ಲಿ ನಿಯೋಜನೆಗೊಂಡ ವ್ಯಕ್ತಿಗಳು ಬರುತ್ತಾರೆಯೇ ಎಂದು ಪರಿಶೀಲಿಸಿದಾಗ, ಅರ್ಜಿದಾರರ ಅಸೋಸಿಯೇಷನ್ ವಸತಿಗೃಹಗಳ ಅಪಾರ್ಟ್‌ಮೆಂಟ್‌ನ್ನು ನಿರ್ವಹಿಸುವುದಕ್ಕಾಗಿ ಅಪಾರ್ಟ್‌ಮೆಂಟ್ ನಿವಾಸಿಗಳು ತಮಗಾಗಿಯೇ ಸೇವೆಯನ್ನು ಪಡೆಯುವುದಕ್ಕಾಗಿಯೇ ಐದು ಮಂದಿ ವ್ಯಕ್ತಿಗಳನ್ನು ಮಾತ್ರವೇ ನಿಯೋಜಿಸಿಕೊಂಡಿರುವುದು ಕಂಡುಬರುತ್ತದೆ. ಅಧಿನಿಯಮದ 2(i) ನೇ ಪ್ರಕರಣದಲ್ಲಿ ನಿರೂಪಿಸಿರುವಂತೆ ಕೆಲಸಗಾರ ಯಾವುದೇ ಕಾರ್ಯಸಂಸ್ಥೆಯ ಕೆಲಸದೊಂದಿಗೆ ಅಥವಾ ಆ ಸಂಬಂಧದಲ್ಲಿ ನಿಯೋಜಿತವಾಗಿರತಕ್ಕದ್ದು. ಆದರೆ, ಈ ಅಸೋಸಿಯೇಷನ್ ಅಧಿನಿಯಮದ ಅಡಿಯಲ್ಲಿ 'ಕಾರ್ಯಸಂಸ್ಥೆ' ಯ ವ್ಯಾಪ್ತಿಯೊಳಗೆ ಬರುವುದಿಲ್ಲ. ಈ ಅಸೋಸಿಯೇಷನ್ ನಿಯೋಜಿತ ವ್ಯಕ್ತಿಗಳು ಅಧಿನಿಯಮದ ಅಡಿಯಲ್ಲಿನ ಕೆಲಸಗಾರ ಸ್ವರೂಪದಲ್ಲಿಯೂ ಬರುವುದಿಲ್ಲ.

ಪ್ರತ್ಯರ್ಜಿದಾರ ವಿವೇಚನೆಯಿಲ್ಲದೆ ಸ್ವೇಚ್ಛಾಚಾರವಾಗಿ ನಡೆದುಕೊಂಡಿರುವುದು ಕಂಡುಬರುತ್ತದೆ.

ಪ್ರತ್ಯರ್ಜಿದಾರನ ಕ್ರಮವು ಸಂಪೂರ್ಣವಾಗಿ ಅಧಿಕಾರವ್ಯಾಪ್ತಿಯನ್ನು

ಮೀರಿದುದಾಗಿರುತ್ತದೆ. ಅಧಿಕಾರವ್ಯಾಪ್ತಿ ಹೊಂದಿರದ ಪ್ರಾಧಿಕಾರಗಳು ಹೊರಡಿಸಿದ ಯಾವುದೇ ಆದೇಶಗಳು ಮೊದಲಿನಿಂದಲೂ ಅನೂರ್ಜಿತವಾಗಿದೆ ಮತ್ತು ಅದನ್ನು ವಜಾಮಾಡುವುದು ಅಗತ್ಯವಾಗಿದೆ.

ಮ್ಯಾಜಿಸ್ಟ್ರೇಟರು, ಪ್ರತ್ಯರ್ಜಿದಾರರು ದಾಖಲಿಸಿದ ದೂರನ್ನು ವಿವೇಚಿಸದೇ ಸಂಜ್ಞಾನಕ್ಕೆ ತೆಗೆದುಕೊಂಡು ಉದಾಸೀನ ಸ್ವರೂಪದಲ್ಲಿ ಈ ವ್ಯವಹರಣೆಗಳನ್ನು ಪ್ರಾರಂಭಿಸಿರುವುದು ಕಂಡುಬರುತ್ತದೆ. ಮ್ಯಾಜಿಸ್ಟ್ರೇಟರು ಆಪಾದಿತರ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸುವ ಮುಂಚೆ ಮೊಕದ್ದಮೆಯಲ್ಲಿ ಮೇಲ್ನೋಟಕ್ಕೆ ಕಂಡುಬರುವ ದೂರನ್ನು ಮನವರಿಕೆ ಮಾಡಿಕೊಳ್ಳಲು ಸ್ವತಃ ತಾನೇ ಪರಿಶೀಲಿಸುವುದು ಅತ್ಯಗತ್ಯವಾಗಿರತಕ್ಕದ್ದು. ಮ್ಯಾಜಿಸ್ಟ್ರೇಟರು ಪ್ರಾರಂಭಿಸಿದ ವ್ಯವಹರಣೆಗಳು ಮುಂದುವರೆಸದಿರಲು ಈ ನ್ಯಾಯಾಲಯವು ಮಧ್ಯಪ್ರವೇಶಿಸಿ ಮ್ಯಾಜಿಸ್ಟ್ರೇಟರ ವ್ಯವಹರಣೆಗಳನ್ನು ತಡೆಯುತ್ತದೆ.

ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ದಿನಾಂಕ 21.07.2012 ರಂದು ಅನುಬಂಧ–ಎಫ್ ನಲ್ಲಿನ ಕ್ರಿಮಿನಲ್ ದೂರನ್ನು ಮತ್ತು ಸಿಸಿ ಸಂ.1961/2012 ರಲ್ಲಿ ಎಂಎಂಟಿಸಿ–3 ಬೆಂಗಳೂರಿನಲ್ಲಿನ ಕಡತದ ಮೇಲಿನ ಅನಂತರದ ವ್ಯವಹರಣೆಗಳನ್ನು ಈ ಮೂಲಕ ರದ್ದುಗೊಳಿಸಿದೆ. ವೆಚ್ಚಗಳು ಇಲ್ಲ.

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

1. *2001 (1) ಎಲ್ಎಲ್ಜೆ 1413*
*ಮ್ಯಾನೇಜ್‌ಮೆಂಟ್ ಆಫ್ ಸೋಮ್ ವಿಹಾರ್*
*ಅಪಾರ್ಟ್‌ಮೆಂಟ್ ಓನರ್ಸ್ ಹೌಸಿಂಗ್ ಮೇನ್‌ಟನನ್ಸ್*
*ಸೊಸೈಟಿ ಲಿಮಿಟೆಡ್ –ವಿರುದ್ಧ– ಕೆಲಸಗಾರ*
*c/o ಇಂಡಿಯನ್ ಇಂಜಿನಿಯರಿಂಗ್ ಅಂಡ್*
*ಜನರಲ್ ಮಜ್ದೂರ್* *(ಉಲ್ಲೇ) 11*

*2. ಎಐಆರ್ 1978 ಎಸ್‌ಸಿ 548*
*ಬೆಂಗಳೂರು ನೀರು ಸರಬರಾಜು ಮತ್ತು ಒಳ*
*ಚರಂಡಿ ಮಂಡಳಿ –ವಿರುದ್ಧ– ಆರ್. ರಾಜಪ್ಪ*
*ಮತ್ತು ಇತರರು (ಉಲ್ಲೇ) 11*

ಅರ್ಜಿದಾರರ ಪರವಾಗಿ : ಶ್ರೀ ಬಿ.ಸಿ. ಪ್ರಭಾಕರ್, ವಕೀಲರು.
ಪ್ರತ್ಯರ್ಜಿದಾರರ ಪರವಾಗಿ : ಶ್ರೀ ಶಿವಪ್ರಭು ಎಸ್. ಹಿರೇಮಠ,
ಹೆಚ್ಚುವರಿ ಸರ್ಕಾರಿ ವಕೀಲರು.

## ಆಜ್ಞೆ

**ನ್ಯಾಯಮೂರ್ತಿ ಎಸ್. ಸುಜಾತ.**

ಎಂಎಂಟಿಸಿ–3 ಬೆಂಗಳೂರು (ಸಂಕ್ಷಿಪ್ತವಾಗಿ 'ಮ್ಯಾಜಿಸ್ಟ್ರೇಟ್') ನಲ್ಲಿ ಸಿಸಿ ಸಂ.1961/2012 ಅನ್ನು ದಿನಾಂಕ 21.07.2012 ರಂದು ರಿಟ್ ಅರ್ಜಿಯಲ್ಲಿನ ಅನುಬಂಧ–ಎಫ್ ನಲ್ಲಿರುವಂತೆ ಪ್ರತ್ಯರ್ಜಿದಾರರು ಕ್ರಿಮಿನಲ್ ದೂರನ್ನು ದಾಖಲಿಸಿರುವರು ಮತ್ತು ತತ್ಪರಿಣಾಮವಾಗಿ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸಿರುವರು, ಇದರಿಂದಾಗಿ ಭಾದಿತರಾಗಿ ಅರ್ಜಿದಾರರು ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಮೊದಲ ಅರ್ಜಿದಾರರು ಎಂಬೆಸ್ಸಿ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್ (ಸಂಕ್ಷಿಪ್ತವಾಗಿ 'ಅಸೋಸಿಯೇಷನ್') ನ ಮಾಜಿ ಕಾರ್ಯದರ್ಶಿಯಾಗಿರುವರು, ಎರಡನೇ ಅರ್ಜಿದಾರರು ಅಸೋಸಿಯೇಷನ್‌ನ ಲೆಕ್ಕ ಪತ್ರಗಳ ಸಮಾಲೋಚಕರಾಗಿರುವರು. ಅಸೋಸಿಯೇಷನ್ ತನ್ನ ಸದಸ್ಯರೊಂದಿಗೆ ಪ್ರತಿವರ್ಷ ಚುನಾಯಿತಗೊಂಡ ಪ್ರಧಾನ ಸಮಿತಿಯ ಮುಖಾಂತರ ಎಂಬೆಸ್ಸಿಯಲ್ಲಿನ ಎಲ್ಲರೂ ಬಳಸುವ ಪ್ರದೇಶಗಳನ್ನು ಮತ್ತು ಮೂಲಸೌಕರ್ಯಗಳನ್ನು ವ್ಯವಸ್ಥಾಪಿಸುವ ಮತ್ತು ನಿರ್ವಹಿಸುವ ಕರ್ತವ್ಯಗಳನ್ನು

ವಹಿಸಿಕೊಂಡಿರುತ್ತವೆ. ಅಸೋಸಿಯೇಷನ್ ಸಂಸ್ಥಾ ನಿವೇದನಾ ಪತ್ರವನ್ನು ಮತ್ತು ನಿಯಮಗಳನ್ನು ಮತ್ತು ವಿನಿಯಮನಗಳನ್ನು ರಚಿಸಿಕೊಂಡಿದೆ ಅಸೋಸಿಯೇಷನ್ ಗುರಿಗಳು ಮತ್ತು ಧ್ಯೇಯಗಳು ಈ ಕೆಳಗಿನಂತಿದೆ:

*"(ಎ) ಸದಸ್ಯರುಗಳ ಅನುಕೂಲಕ್ಕಾಗಿ ಸಾಮಾಜಿಕ, ಶೈಕ್ಷಣಿಕ ಮತ್ತು ಮನರಂಜನಾ ಕಾರ್ಯಕ್ರಮಗಳ ಆಯೋಜನೆಗಳನ್ನು, ಸಂಘಟನೆಗಳನ್ನು ಮತ್ತು ಚಟುವಟಿಕೆಗಳನ್ನು ಏರ್ಪಡಿಸುವುದು, ನಿರ್ವಹಿಸುವುದು ಮತ್ತು ಪ್ರಾರಂಭಿಸುವುದು.*

*(ಬಿ) ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಅಥವಾ ಧರ್ಮಾರ್ಥ ಸ್ವರೂಪದ ಚಟುವಟಿಕೆಗಳನ್ನು ಉತ್ತೇಜಿಸಲು ಮತ್ತು ನಡೆಸಲು ಮತ್ತು ಅಂಥ ಕ್ಷೇತ್ರಗಳಲ್ಲಿ ಸಂಶೋಧನೆ ನಡೆಸುವುದಕ್ಕೆ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವುದು.*

*(ಸಿ) ಸಂಪರ್ಕಗಳ ನಿರ್ವಹಣೆ ಮತ್ತು ಭದ್ರತೆಯನ್ನು ಪ್ರಾರಂಭಿಸುವುದು ಮತ್ತು ಎಲ್ಲ ಸದಸ್ಯರುಗಳ ತಮ್ಮ ಸಮಸ್ಯೆಗಳಿಗೆ ಸಹಾಯ ಮತ್ತು ನೆರವನ್ನು ಪಡೆದುಕೊಳ್ಳುವುದಕ್ಕೆ ಅನುವು ಮಾಡಿಕೊಡುವುದು.*

*(ಡಿ) ಅಸೋಸಿಯೇಷನ್ ಎಲ್ಲ ಸದಸ್ಯರುಗಳ ಪ್ರಯೋಜನಕ್ಕಾಗಿ ಇರುವ ಎಲ್ಲರು ಬಳಸುವ ಪ್ರದೇಶವನ್ನು ಮತ್ತು ಮೂಲಭೂತ ಸೌಕರ್ಯವನ್ನು ಅತ್ಯುತ್ತಮ ಅನುಕೂಲವಾಗುವಂತೆ ವ್ಯವಸ್ಥಾಪಿಸುವುದು, ನಿರ್ವಹಿಸುವುದು, ಕಾರ್ಯಗತಗೊಳಿಸುವುದು ಮತ್ತು*

*ನಿಯಂತ್ರಿಸುವುದು. ಯಾವುದೇ ಆವರಣಗಳ ಸಾಮಾನ್ಯ ಸಮಸ್ಯೆಗಳಿಗೆ ಸಂಬಂಧಪಟ್ಟಂತೆ ಎಲ್ಲ ವಿಷಯಗಳನ್ನು ಸದಸ್ಯರುಗಳೂ ತಮ್ಮ ಸಲಹೆ ಸೂಚನೆಗಳನ್ನು ನಿವೇದಿಸಬಹುದು ಮತ್ತು ಮೂರನೇ ಪಕ್ಷಕಾರರೊಂದಿಗೆ ಯಾವುದೇ ವಿಷಯ ಅಥವಾ ಆವರಣಗಳಲ್ಲಿ ಸಾಮಾನ್ಯ ಸಮಸ್ಯೆಗಳಲ್ಲಿ ಉದ್ಭವವಾದ ವಿವಾದವನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸುವುದು.*

*(ಇ) ಅಪಾರ್ಟ್‌ಮೆಂಟ್ ಒಡೆತನ ಮತ್ತು ಅಧಿಭೋಗಕ್ಕೆ ಸಂಬಂಧಪಟ್ಟಂತೆ ಸದಸ್ಯರುಗಳ ನಡುವೆ ನಿಕಟವಾದ ಸಹಕಾರವನ್ನು ಉತ್ತೇಜಿಸುವುದು, ಸದಸ್ಯರುಗಳಿಂದ ಸಾಧ್ಯವಾಗಬಹುದಾದ ಎಲ್ಲ ಸಲಹೆಗಳನ್ನು ಮತ್ತು ಮಾರ್ಗದರ್ಶನವನ್ನು ಪಡೆಯಲು ಮತ್ತು ವ್ಯವಸ್ಥಾಪನಾ ಸಮಿತಿ ಯೋಗ್ಯವೆಂದು ಭಾವಿಸಬಹುದಾದ ಅಂಥ ಸೌಲಭ್ಯಗಳು ಮತ್ತು ಮೂಲಸೌಕರ್ಯಗಳನ್ನು ಒದಗಿಸುವುದು.*

*(ಎಫ್) ಮೇಲಿನ ಉದ್ದೇಶಗಳನ್ನು ಮತ್ತು ಚಟುವಟಿಕೆಗಳನ್ನು ಮತ್ತು ಸಮರ್ಥವಾಗಿ ಅಪಾರ್ಟ್‌ಮೆಂಟ್ ನಿವಾಸಿಗಳ ಅನುಕೂಲತೆಗಳನ್ನು ನಿರ್ವಹಿಸಿಕೊಂಡು ಹೋಗುವುದಕ್ಕೆ ಮತ್ತು ಬೆಂಗಳೂರು ನಗರದಲ್ಲಿ ಇದೇ ಉದ್ದೇಶಗಳನ್ನು ಹೊಂದಿರುವಂತಹ ವ್ಯಕ್ತಿಗಳೊಂದಿಗೆ ಮತ್ತು / ಅಥವಾ ಇತರ ನಿಕಾಯಗಳೊಂದಿಗೆ ಮತ್ತು ಸಂಘಟನೆಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದಕ್ಕೆ ಅವುಗಳ ಸಹಯೋಗದಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವುದಕ್ಕೆ ಮತ್ತು ಅನುಭವಗಳನ್ನು ಹಂಚಿಕೊಳ್ಳುವುದಕ್ಕೆ ಅವರೊಂದಿಗೆ*

*ಸಭೆಗಳನ್ನು ಅಥವಾ ಪಾಲ್ಗೊಳ್ಳುವಿಕೆಯನ್ನು ಆಯೋಜಿಸುವುದು, ಅವಶ್ಯಕವೆಂದು ಪರಿಗಣಿಸಬಹುದಾದಂತಹ ಇತರ ಚಟುವಟಿಕೆಗಳನ್ನು ಪ್ರಾತಿನಿಧ್ಯತೆಗೊಳಿಸಲು ಅಥವಾ ನಡೆಸಲು ಯಾವಾಗಲು ಈ ಅಸೋಸಿಯೇಷನ್ ಸನ್ನದ್ಧವಾಗಿರುತ್ತದೆ.”*

3. ಅಸೊಸಿಯೇಷನ್ ತನ್ನೆಲ್ಲ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಐವರು ಸದಸ್ಯರುಗಳು ನಿಯೋಜಿತವಾಗಿರುತ್ತಾರೆ. ಪ್ರತ್ಯರ್ಜಿದಾರರು, ದಿನಾಂಕ 22.03.2012 ರಂದು ಅಸೋಸಿಯೇಷನ್‌ಗೆ ಭೇಟಿ ಕೊಟ್ಟಿರುತ್ತಾರೆ ಮತ್ತು ದಾಖಲೆಗಳನ್ನು ಪರಿಶೀಲಿಸಿರುತ್ತಾರೆ ಮತ್ತು ಅರ್ಜಿದಾರರ ವಿರುದ್ಧ ಕಾರ್ಮಿಕ ಅಧಿನಿಯಮಗಳ ಅಡಿಯಲ್ಲಿ ಆಗಿರುವ ಕೆಲವು ಉಲ್ಲಂಘನೆಗಳನ್ನು ಪರಿಶೀಲಿಸಿ ಆಪಾದನೆಯ ಟಿಪ್ಪಣಿಗಳನ್ನು ಮಾಡಿ ನಿರ್ದೇಶನಗಳನ್ನು ಅನುಪಾಲನೆ ಮಾಡಲು ಅನುಪಾಲನಾ ವರದಿಯುನ್ನು ಸಲ್ಲಿಸಿರುತ್ತಾರೆ. ಅದರಂತೆ ಅರ್ಜಿದಾರರು ಈ ಅಸೋಸಿಂಯೇಷನ್ ಂಯಾವುದೇ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲವೆಂದು ಸ್ಪಷ್ಟಪಡಿಸಿರುತ್ತಾರೆ. ಅಸೋಸಿಯೇಷನ್ ಮುಖ್ಯಉದ್ದೇಶ ಎಲ್ಲರ ಬಳಕೆಂಯ ಪ್ರದೇಶಗಳನ್ನು ಮತ್ತು ಮೂಲಸೌಲಭ್ಯಗಳನ್ನು ನಿರ್ವಹಿಸುವುದಾಗಿದೆ. ಅಸೋಸಿಯೇಷನ್ ಪ್ರತಿವರ್ಷ ಚುನಾಯಿತರಾಗುವ ಸದಸ್ಯರುಗಳ, ಸಮಿತಿ ಸದಸ್ಯರುಗಳ ಮೂಲಕ ನಿರ್ವಹಿಸಲಾಗುತ್ತದೆ. ತದನುಸಾರವಾಗಿ ಪ್ರತ್ಯರ್ಜಿದಾರರು ಅಧಿಕಾರ ವ್ಯಾಪ್ತಿಯನ್ನು ಕಸಿದುಕೊಳ್ಳುವಂತಹ ಮತ್ತಷ್ಟು ವ್ಯವಹರಣೆಗಳನ್ನು ಬಿಟ್ಟುಬಿಡುವುದಕ್ಕೆ ಪ್ರತ್ಯರ್ಜಿದಾರರನ್ನು ನಿವೇದಿಸಿ ಕೊಂಡಿರುವರು. ಈ ಪ್ರತ್ಯರ್ಜಿದಾರರು ಸಿಸಿ ಸಂ.1961/2012 ರಲ್ಲಿ ಮ್ಯಾಜಿಸ್ಟ್ರೇಟ್‌ರ ಮುಂದೆ ಕರಾರು ಕಾರ್ಮಿಕರ (ನಿಯಂತ್ರಣ ಮತ್ತು ರದ್ದುಗೊಳಿಸುವ) ಅಧಿನಿಯಮ, 1970 (ಸಂಕ್ಷಿಪ್ತವಾಗಿ ‘ಅಧಿನಿಯಮ’) ರ 29ನೇ ಪ್ರಕರಣವನ್ನು ಓದಿಕೊಂಡು, 4ನೇ ನಿಯಮ, 7ನೇ ಪ್ರಕರಣ ನಿಯಮ 17(1) ಇವುಗಳು ಉಲ್ಲಂಘನೆಯಾಗಿರುವ ಆಪಾದನೆಯನ್ನು ಮಾಡಿ ಕ್ರಿಮಿನಲ್ ದೂರನ್ನು ದಾಖಲಿಸಿರುವರು. ಪ್ರತ್ಯರ್ಜಿದಾರರು ದಾಖಲಿಸಿದ ದೂರು ನೋಂದಾಯಿತವಾಗಿರುತ್ತದೆ ಮತ್ತು ಹೊರಡಿಸಿದ ಸಮನ್ನುಗಳು

ಕ್ರಮವಾಗಿರುತ್ತದೆ. ಪ್ರತ್ಯರ್ಜಿದಾರರು, ಪ್ರತ್ಯರ್ಜಿದಾರರಿಂದ ಸಿ.ಸಿ. ಸಂಖ್ಯೆ. 1961/2012 ರಲ್ಲಿ ಮ್ಯಾಜಿಸ್ಟ್ರೇಟವರ ಮುಂದೆ ದಾಖಲಿಸಲಾದ ದೂರನ್ನು ಹಾಗೂ ಇದರೊಂದಿಗೆ ಮ್ಯಾಜಿಸ್ಟ್ರೇಟರವರ ಪ್ರಾರಂಭಿಕ ವ್ಯವಹರಣೆಗಳನ್ನು ಈ ಅರ್ಜಿಯಲ್ಲಿ ಪ್ರಶ್ನಿಸಿರುತ್ತಾರೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಹಾಜರಾಗಿ ಈ ಅಸೊಸಿಯೇಷನ್ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಬರುವುದಿಲ್ಲ ಎಂದು ವಾದಿಸಿರುತ್ತಾರೆ. ಅಧಿನಿಯುಮದ ಉಪಬಂಧಗಳನ್ನು ಉಲ್ಲಂಘಿಸಿರುವ ಆರೋಪಗಳಿಗಾಗಿ ಮ್ಯಾಜಿಸ್ಟ್ರೇಟರ ಮುಂದೆ ಕ್ರಿಮಿನಲ್ ದೂರನ್ನು ದಾಖಲಿಸುವುದಕ್ಕೆ ಪ್ರತ್ಯರ್ಜಿದಾರರಿಗೆ ಅಧಿಕಾರವ್ಯಾಪ್ತಿ ಇಲ್ಲವೆಂದು ವಾದಿಸಿರುತ್ತಾರೆ. ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ದಾಖಲಿಸಿದ ದೂರನ್ನು ಮ್ಯಾಜಿಸ್ಟ್ರೇಟರವರು ತಮ್ಮ ವಿವೇಚನೆಯನ್ನು ಬಳಸದೆ ಸಂಜ್ಞಾನಕ್ಕೆ ತೆಗೆದುಕೊಂಡಿರುತ್ತಾರೆಂದೂ ವಾದಿಸಿದ್ದಾರೆ. ಹಾಗಾಗಿ, ಈ ಅರ್ಜಿಯನ್ನು ಗಮನಕ್ಕೆ ತಂದುಕೊಳ್ಳದೆ ಮತ್ತು ಮ್ಯಾಜಿಸ್ಟ್ರೇಟರು ದೂರನ್ನು ಪರಿಶೀಲಿಸದೇ ಕ್ರಿಮಿನಲ್ ಮೊಕದ್ದಮೆಯಲ್ಲಿ ಅರ್ಜಿದಾರರನ್ನು ಆಪಾದಿತರೆಂದು ಸಮನು ಹೊರಡಿಸಿರುವುದು ಸಂಪೂರ್ಣವಾಗಿ ಅಸಮರ್ಥನೀಯವಾದುದು ಎಂದು ತಮ್ಮ ವಾದಾಂಶವನ್ನು ಮಂಡಿಸಿರುತ್ತಾರೆ. ತದನುಸಾರವಾಗಿ, ಮಾನ್ಯ ನ್ಯಾಯವಾದಿಗಳು ಕ್ರಿಮಿನಲ್ ದೂರನ್ನು ರದ್ದುಗೊಳಿಸಲು ರಿಟ್ ಅರ್ಜಿಯನ್ನು ಪುರಸ್ಕರಿಸುವುದಕ್ಕೆ ಮತ್ತು ಸಿಸಿ ಸಂ.1961/2012 ರಲ್ಲಿ ಮ್ಯಾಜಿಸ್ಟ್ರೇಟರ ಮುಂದೆ ತರುವಾಯದ ವ್ಯವಹರಣೆಗಳನ್ನು ರದ್ದುಗೊಳಿಸಲು ನಿವೇದಿಸಿರುವರು.

5. ವಿರುದ್ಧವಾಗಿ, ಮಾನ್ಯ ಸರ್ಕಾರಿ ಹೆಚ್ಚುವರಿ ವಕೀಲರಾದ ಶ್ರೀ ಶಿವಪ್ರಭು ಎಸ್. ಹೀರೆಮಠ ಇವರು ಪ್ರತ್ಯರ್ಜಿದಾರರ ಪರವಾಗಿ ಹಾಜರಾಗಿ ಆಕ್ಷೇಪಿತ ಆದೇಶಗಳನ್ನು ಸಮರ್ಥಿಸಿರುವರು. ಪ್ರಶ್ನಿತ ಅಸೋಸಿಯೇಷನ್ ಸಂಸ್ಥೆಯಾಗಿದೆ ಮತ್ತು ಅಧಿನಿಯಮ ಮತ್ತು ಇತರ ಕಾರ್ಮಿಕ ಅಧಿನಿಯಮಗಳ ಉಪಬಂಧಗಳ ಅಡಿಯಲ್ಲಿ ಅದು ಒಳಗೊಳ್ಳುತ್ತದೆ ಎಂದು ವಾದವನ್ನು ಮಂಡಿಸಿರುವರು. ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಸೋಸಿಯೇಷನ್ ಸ್ವತಃ ತಾನೇ ನೋಂದಣಿಯಾಗುವುದು ಕಡ್ಡಾಯವಾಗಿರುತ್ತದೆ ಮತ್ತು ಅಧಿನಿಯಮ ಮತ್ತು

ಅದರಲ್ಲಿನ ನಿಯಮಗಳ ಅಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಗಳನ್ನು ಅಸೋಸಿಯೇಷನ್ ಅನುಸರಿಸುವುದು ಕಡ್ಡಾಯವಾಗಿರುತ್ತದೆ. ಅರ್ಜಿದಾರರಿಗೆ ಯುಕ್ತ ಅವಕಾಶಗಳನ್ನು ಒದಗಿಸಿದ್ದರೂ ಸಹ, ಅವರು ಅಧಿನಿಯಮ ಮತ್ತು ನಿಯಮಗಳ ಉಪಬಂಧಗಳನ್ನು ಪಾಲನೆ ಮಾಡುವುದಕ್ಕೆ ವಿಫಲವಾಗಿರುವುದರಿಂದ ಪ್ರತ್ಯರ್ಜಿದಾರರು ಮ್ಯಾಜಿಸ್ಟ್ರೇಟರ ಮುಂದೆ ಕ್ರಿಮಿನಲ್ ದೂರನ್ನು ದಾಖಲಿಸಿರುವರು. ಪ್ರತ್ಯರ್ಜಿದಾರರು ದಾಖಲಿಸಿದ ಕ್ರಿಮಿನಲ್ ದೂರಿನ ಕ್ರಮವಾಗಿ ಮ್ಯಾಜಿಸ್ಟ್ರೇಟರ ಅಧಿನಿಯಮದ ಉಪಬಂಧಗಳ ಅನುರೂಪತೆಯಲ್ಲಿ ದೂರಿಗೆ ಅನುಸಾರವಾಗಿ ಆದೇಶವನ್ನು ಹೊರಡಿಸಿರುತ್ತಾರೆ ಮತ್ತು ಹಾಗಾಗಿ, ಈ ನ್ಯಾಯಾಲಯದ ಯಾವುದೇ ಹಸ್ತಕ್ಷೇಪ ಅಗತ್ಯವಿಲ್ಲವೆಂದು ನಿವೇದಿಸಿದ್ದಾರೆ. ತದನುಸಾರವಾಗಿ ರಿಟ್ ಅರ್ಜಿಯನ್ನು ವಜಾಮಾಡಲು ಅವರು ನಿವೇದಿಸಿರುತ್ತಾರೆ.

6. ಪಕ್ಷಕಾರರ ಹಾಗೂ ಪ್ರತಿಸ್ಪರ್ಧಿಗಳ ವಾದಗಳನ್ನು ಆಲಿಸಲಾಗಿದೆ ಮತ್ತು ಸಲ್ಲಿಸಿದ ಸಲ್ಲಿಕೆಗಳನ್ನು ಪರಿಶೀಲಿಸಲಾಗಿದೆ ಮತ್ತು ದಾಖಲೆಯಲ್ಲಿರುವ ವಸ್ತು ವಿಷಯಗಳನ್ನು ಅವಲೋಕಿಸಿದಾಗ, ಅಪಾರ್ಟ್‌ಮೆಂಟ್‌ನ ಮಾಲೀಕರು / ನಿವಾಸಿಗಳು ತಮಗಾಗಿ ವೈಯಕ್ತಿಕ ನಿರ್ದಿಷ್ಟ ಸೇವೆಗಳನ್ನು ಪಡೆದುಕೊಳ್ಳಲು ಈ ಅಸೋಸಿಯೇಷನ್ ಅನ್ನು ಸ್ಥಾಪಿಸಿರುತ್ತಾರೆ, ಅಪಾರ್ಟ್‌ಮೆಂಟ್‌ಗಳನ್ನು ನಿರ್ವಹಿಸುವುದಕ್ಕಾಗಿಯೇ ಅಲ್ಲಿನ ನಿವಾಸಿಗಳು ಈ ಅಸೋಸಿಯೇಷನ್ ಅನ್ನು ಸ್ಥಾಪಿಸಿರುವರು ಎಂಬುದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಅಪಾರ್ಟ್‌ಮೆಂಟ್‌ನ ನಿವಾಸಿಗಳ ಅಗತ್ಯತೆಗಳನ್ನು ನೆರವೇರಿಸುವ ಧ್ಯೇಯ ಮತ್ತು ಉದ್ದೇಶದಿಂದಲೇ ಈ ಅಸೋಸಿಯೇಷನ್ ಅನ್ನು ಸ್ಥಾಪಿಸಲಾಗಿದೆ. ಅಸೋಸಿಯೇಷನ್ ಎಲ್ಲ ಸದಸ್ಯರುಗಳ ಅತ್ಯುತ್ತಮ ಅನುಕೂಲತೆಗೆ ಮತ್ತು ಪ್ರಯೋಜನಕ್ಕೆ ಎಲ್ಲರು ಬಳಸುವ ಪ್ರವೇಶ ಮತ್ತು ಸಾಮಾನ್ಯ ಮೂಲಸೌಲಭ್ಯಗಳನ್ನು ಸಾಧ್ಯವಾದಷ್ಟು ವ್ಯವಸ್ಥಾಪಿಸಲು, ನಿರ್ವಹಿಸಲು, ಸೌಲಭ್ಯಗಳನ್ನು ಒದಗಿಸಲು, ನಿಯಂತ್ರಿಸುವ ಸಲುವಾಗಿ ಈ ಎಲ್ಲ ಉದ್ದೇಶವನ್ನು ಇಟ್ಟುಕೊಂಡು ಈ ಅಸೋಸಿಯೇಷನ್ ಅನ್ನು ಸ್ಥಾಪಿಸಲಾಗಿರುತ್ತದೆ. ಅಸೋಸಿಯೇಷನ್ ಸದಸ್ಯರುಗಳ ಪೈಕಿಯಿಂದ ವ್ಯವಸ್ಥಾಪನಾ ಸಮಿತಿಯು ಚುನಾಯಿತಗೊಂಡಿರುತ್ತದೆ. ಈ ವ್ಯವಸ್ಥಾಪನಾ ಸಮಿತಿ ಅಸೋಸಿಯೇಷನ್ ಉದ್ದೇಶಗಳನ್ನು ಸಾಧಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ.

ಆದುದರಿಂದ ಅಸೋಸಿಯೇಷನ್ ಇಡೀ ಉದ್ದೇಶಗಳು ಯಾವುದೇ ವಾಣಿಜ್ಯ ಚಟುವಟಿಕೆಗಳ ವ್ಯಾಪಾರ ಮತ್ತು ವಾಣಿಜ್ಯಗಳನ್ನು ಒಳಗೊಂಡಿರುವುದಿಲ್ಲ. ಪ್ರತ್ಯರ್ಜಿದಾರರು, ಅಧಿನಿಯಮದ ಉಪಬಂಧಗಳ ಉಲ್ಲಂಘನೆಗಾಗಿ ವ್ಯವಹರಣೆಗಳನ್ನು ಪ್ರಾರಂಭಿಸಿದ್ದಾರೆಯೇ ಹೊರತು ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಸೋಸಿಯೇಷನ್ ನೋಂದಣಿಯಾಗದಿರುವುದಕ್ಕಲ್ಲ ಮತ್ತು ಅಧಿನಿಯಮ ಮತ್ತು ನಿಯಮಗಳು ನಿಗದಿಪಡಿಸಿದ ಮತ್ತಷ್ಟು ಪ್ರಕ್ರಿಯೆಗಳನ್ನು ಅನುಸರಿಸದಿರುವ ಬಗ್ಗೆ ಅಲ್ಲ ಎಂಬುದನ್ನು ಗಮನಕ್ಕೆ ತಂದುಕೊಳ್ಳಲಾಗಿದೆ. ಅದರಂತೆ ಪ್ರಶ್ನಿತ ಅಸೋಸಿಯೇಷನ್‌ಗೆ ಅಧಿನಿಯಮವು ಅನ್ವಯವಾಗುತ್ತದೆಯೇ ಎಂಬ ಪ್ರಶ್ನೆಯನ್ನು ಪರಿಶೀಲಿಸಬೇಕಿದೆ. ಅಧಿನಿಯಮದ ಉಪಬಂಧಗಳು ಅಸೋಸಿಯೇಷನ್‌ಗೆ ಪ್ರಯೋಜನ ಕಾರಿಯಾಗಿದೆಯೇ ಎಂಬುದನ್ನು ಪರಾಮರ್ಶಿಸಬೇಕಿದೆ. ಅಧಿನಿಯಮದ 1(4) ನೇ ಪ್ರಕರಣದ ಉದ್ದೇಶಗಳಲ್ಲಿ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರು ನಿಯೋಜಿತವಾಗಿರುವ ಆ ಯಾವುದೇ ಪ್ರತಿಯೊಂದು ಸಂಸ್ಥೆ ಅಥವಾ ಮುಂದೆ ಬರುವ ಹನ್ನೆರಡು ತಿಂಗಳಿಗಾಗಿ ಯಾವುದೇ ದಿನದಿಂದ ಕರಾರು ಕಾರ್ಮಿಕರನ್ನು ನಿಯೋಜಿಸಿಕೊಳ್ಳುವ ಮತ್ತು ಉದ್ಯೋಗದಾತನಾದ ಪ್ರತಿಯೊಬ್ಬ ಗುತ್ತಿಗೆದಾರ ಮುಂದೆ ಬರುವ ಹನ್ನೆರಡು ತಿಂಗಳಲ್ಲಿ ಯಾವುದೇ ದಿನದಂದು ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರನ್ನು ನಿಯೋಜಿಸಿಕೊಳ್ಳುವ ಪ್ರತಿಯೊಂದು ಸಂಸ್ಥೆಗೆ ಅಧಿನಿಯಮದ 1(4)ನೇ ಪ್ರಕರಣದ ಉದ್ದೇಶಗಳು ಅನ್ವಯವಾಗುತ್ತದೆ.

7. ಸದರಿ ಉಪಬಂಧವನ್ನು ಅವಲೋಕಿಸಿದಾಗ ಅಧಿನಿಯಮವನ್ನು ಅನ್ವಯ ಮಾಡಿಕೊಳ್ಳುವ ಸಂಬಂಧದಲ್ಲಿ ಪೂರೈಸಬೇಕಾದ ಷರತ್ತುಗಳನ್ನು ಸೂಚಿಸಿದೆ:

(i) ಕಾರ್ಯಸಂಸ್ಥೆಯಾಗಿರಬೇಕು;

(ii) ಮುಂದೆಬರುವ ಹನ್ನೆರಡು ತಿಂಗಳುಗಳಲ್ಲಿ ಇಪ್ಪತ್ತು ಅಥವಾ ಹೆಚ್ಚು ಕೆಲಸಗಾರರನ್ನು ನಿಯೋಜಿಸಿಕೊಳ್ಳಬೇಕು.

(iii) ಕರಾರು ಕಾರ್ಮಿಕದಂತಹ ಉದ್ಯೋಗವಾಗಿರಬೇಕು.

8. "ಕಾರ್ಯಸಂಸ್ಥೆ" ಯನ್ನು ಅಧಿನಿಯಮದ 2(ಇ) ಪ್ರಕರಣದಲ್ಲಿ ವ್ಯಾಖ್ಯಾನಿಸಲಾಗಿದೆ ಅದು ಈ ಕೆಳಗಿನಂತಿದೆ.

*"2 (ಇ) 'ಕಾರ್ಯಸಂಸ್ಥೆ' ಎಂದರೆ –*

*(i) ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರದ ಯಾವುದೇ ಕಚೇರಿ ಅಥವಾ ಇಲಾಖೆ, ಅಥವಾ*

*(ii) ಯಾವುದೇ ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಉತ್ಪಾದನೆ ಅಥವಾ ವೃತ್ತಿಯನ್ನು ಮಾಡುತ್ತಿರುವ ಯಾವುದೇ ಸ್ಥಳ;*

9. 'ಕೆಲಸಗಾರ' ಎಂಬುದನ್ನು ಅಧಿನಿಯಮದ 2(i) ಪ್ರಕರಣದಲ್ಲಿ ವ್ಯಾಖ್ಯಾನಿಸಲಾಗಿದೆ ಅದು ಈ ಮುಂದಿನಂತಿದೆ:

*"(i) 'ಕೆಲಸಗಾರ' ಎಂದರೆ ಯಾರೇ ವ್ಯಕ್ತಿ ಯಾವುದೇ ಕಾರ್ಯಸಂಸ್ಥೆಯಲ್ಲಿ ಯಾವುದೇ ಕುಶಲ, ಅರೆ-ಕುಶಲ ಅಥವಾ ಕುಶಲವಲ್ಲದ ದೈಹಿಕ ಕೆಲಸಗಳು ಕೂಲಿ ಅಥವ ಇನಾಮಿಗಾಗಿ ಮೇಲ್ವಿಚಾರಣೆ, ತಾಂತ್ರಿಕ, ಅಥವಾ ಲಿಪಿಕ ಕೆಲಸವನ್ನು ಮಾಡಲು ನಿಯೋಜಿತವಾದ ಅಥವಾ ಕೆಲಸಗಳ ಸಂಬಂಧದಲ್ಲಿ ನೇಮಕಗೊಂಡ ವ್ಯಕ್ತಿ, ಆದರೆ ವ್ಯಕ್ತ ಅಥವಾ ಸೂಚಿತ ಉದ್ಯೋಗದ ನಿಬಂಧನೆಗೊಳ ಪಡುವ ಯಾರೇ ವ್ಯಕ್ತಿ;*

*(ಎ) ವ್ಯವಸ್ಥಾಪನಾ ಅಥವಾ ಆಡಳಿತಾತ್ಮಕ ಸಾಮರ್ಥ್ಯದಲ್ಲಿ ಪ್ರಧಾನವಾಗಿ ನಿಯೋಜಿತವಾದ ಯಾರೇ ವ್ಯಕ್ತಿ; ಅಥವಾ*

*(ಬಿ) ಪ್ರತಿ ತಿಂಗಳು ಐದುನೂರು ರೂಪಾಯಿಗಳನ್ನು ಮೀರಿದ ಕೂಲಿಯನ್ನು ತೆಗೆದುಕೊಂಡು, ಮೇಲ್ವಿಚಾರಣೆಯನ್ನು ಸಮರ್ಥವಾಗಿ ಮಾಡಲು ನಿಯೋಜಿತಗೊಂಡಿರುವ ವ್ಯಕ್ತಿ ಅಥವಾ ಕಚೇರಿಗೆ ಲಗತ್ತಾಗಿರುವ ಕರ್ತವ್ಯಗಳ ಸ್ವರೂಪವನ್ನು ಚಲಾಯಿಸಲು ವ್ಯಕ್ತಿ ಅಥವಾ ವ್ಯವಸ್ಥಾಪನ ಸ್ವರೂಪದ ಕರ್ತವ್ಯಗಳನ್ನು ಪ್ರಧಾನವಾಗಿ ನಿರ್ವಹಿಸಲು ಅವನಿಗೆ ನಿಹಿತಗೊಂಡ ಅಧಿಕಾರದ ಮೂಲಕ ಕಾರ್ಯನಿರ್ವಹಿಸುತ್ತಿರುವ; ಅಥವಾ*

*(ಸಿ) ಪ್ರಧಾನ ಉದ್ಯೋಗದಾತನು ಅಥವಾ ಅವನ ಪರವಾಗಿ ಹೊರ ಕೆಲಸಗಾರನಾಗಿರುವ ಯಾರೇ ವ್ಯಕ್ತಿಗೆ ಯಾವುದೇ ವಸ್ತುಗಳನ್ನು ಅಥವಾ ಸಾಮಾಗ್ರಿಗಳನ್ನು ಕೊಟ್ಟು, ಪ್ರಧಾನ ಉದ್ಯೋಗದಾತನು ವಾಣಿಜ್ಯ ಅಥವಾ ವ್ಯಾಪಾರಗಳ ಉದ್ದೇಶಕ್ಕಾಗಿ ಮನೆಯನ್ನಾಗಲೀ, ಅಥವಾ ಕೆಲವು ಇತರ ಆವರಣವನ್ನಾಗಲೀ ಶುಭ್ರಗೊಳಿಸಲು, ಸ್ವಚ್ಛಗೊಳಿಸಲು, ಮಾರ್ಪಾಡಿಸಲು, ಅಲಂಕರಿಸಲು, ಸಿದ್ಧ ಪಡಿಸಲು, ದುರಸ್ತಿಗೊಳಿಸಲು, ಅನ್ವಯಿಸಲು ಅಥವಾ ಮಾರಾಟಕ್ಕಾಗಿ ಅನ್ಯಥಾ ನವೀಕರಿಸಲು ಆವರಣಗಳಲ್ಲಿ ಪ್ರಧಾನ ಉದ್ಯೋಗದಾರನ ನಿಯಂತ್ರಣ ಮತ್ತು ವ್ಯವಸ್ಥಾಪನೆಯ ಅಡಿಯಲ್ಲಿ ಹೊರ ಕೆಲಸಗಾರನಿಗೆ ಮಾಡಲು ತಿಳಿಸುವುದು ಸಾಧ್ಯವಾಗುವುದಿಲ್ಲ.*

*– ಅಂಥ ಯಾರೇ ವ್ಯಕ್ತಿ ಇದರಲ್ಲಿ ಒಳಗೊಳ್ಳುವುದಿಲ್ಲ.*

10. ಅಧಿನಿಯುಮದ ಅನ್ವಯುತೆಗಾಗಿ ಈ ಉಪಬಂಧಗಳನ್ನು ಗಮನದಲ್ಲಿಟ್ಟುಕೊಂಡು ಮೇಲಿನ ಉಪಬಂಧಗಳನ್ನು ಒಟ್ಟಾಗಿ ಓದಿಕೊಂಡಾಗ,

ಅಧಿನಿಯಮ ಅಡಿಯಲ್ಲಿ ಉದ್ದೇಶಿಸಿದಂತೆ 'ಕಾರ್ಯಸಂಸ್ಥೆ' ಯನ್ನು ಸ್ಥಾಪನೆ ಮಾಡಬೇಕಾದುದು ಅತ್ಯಗತ್ಯವಾಗಿದೆ. ಮೊದಲನೆಯದಾಗಿ, ಅರ್ಜಿದಾರರ ಅಸೋಸಿಯೇಷನ್ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿದಾಗ. ಅದು, ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಕಚೇರಿ ಅಥವಾ ಇಲಾಖೆಯಾಗಿರುವುದಿಲ್ಲ. ಅಸೋಸಿಯೇಷನ್ ಯಾವುದೇ ಸ್ಥಳದಲ್ಲಿ ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ಉತ್ಪಾದನೆಯಂತಹ ವೃತ್ತಿಗಳ ಚಟುವಟಿಕೆಗಳನ್ನು ನಡೆಸದಿರುವುದು ಕಂಡುಬರುತ್ತದೆ. ಇದರಿಂದ ಅಸೋಸಿಯೇಷನ್ ಅಧಿನಿಯಮದ 2(ಇ) ಪ್ರಕರಣದಂತೇ 'ಕಾರ್ಯಸಂಸ್ಥೆ' ಯೆಂದು ಅರ್ಥೈಸಲಾಗುವುದಿಲ್ಲ ಎಂಬುದು ಇಲ್ಲಿ ಸುಸ್ಪಷ್ಟವಾಗಿದೆ. ಎರಡನೇಯದಾಗಿ, ಅರ್ಜಿದಾರರ ಅಸೋಸಿಯೇಷನ್ ಐದು ಉದ್ಯೋಗಿಗಳನ್ನು ಮಾತ್ರವೇ ನಿಯೋಜಿಸಿಕೊಂಡಿರುವುದನ್ನು ಅರ್ಜಿದಾರರು ಅದನ್ನು ಈ ಮೊದಲೇ ತಿಳಿಸಿರುತ್ತಾರೆ ಮತ್ತು ಪ್ರತ್ಯರ್ಜಿದಾರರು ದಾಖಲಿಸಿದ ಇಪ್ಪತ್ತು ಅಥವಾ ಅದಕ್ಕಿಂತ ಹೆಚ್ಚಿನ ಕೆಲಸಗಾರರು ನಿಯೋಜಿತವಾಗಿರುವ ಬಗ್ಗೆ ಅಥವಾ ಕರಾರು ಕಾರ್ಮಿಕರಂತೆ ಮುಂದಿನ ಹನ್ನೆರಡು ತಿಂಗಳಲ್ಲಿನ ಯಾವುದೇ ದಿನದಂದು ನಿಯೋಜಿತವಾಗುವ ಕೆಲಸಗಾರರ ಬಗ್ಗೆ ಯಾವುದೇ ಸಾಕ್ಷ್ಯಾಧಾರಗಳು ಇರುವುದಿಲ್ಲ. ಮೂರನೇಯದಾಗಿ, ಅಧಿನಿಯಮದ 2(i) ನೇ ಪ್ರಕರಣದ ಅಡಿಯಲ್ಲಿನ 'ಕೆಲಸಗಾರ' ದ ಅರ್ಥ ವಿವರಣೆಯೊಳಗೆ ಅರ್ಜಿದಾರರ ಅಸೋಸಿಯೇಷನ್‌ನಲ್ಲಿ ನಿಯೋಜನೆಗೊಂಡ ವ್ಯಕ್ತಿಗಳು ಬರುತ್ತಾರೆಯೇ ಎಂದು ಪರಿಶೀಲಿಸಿದಾಗ, ಅರ್ಜಿದಾರರ ಅಸೋಸಿಯೇಷನ್ ವಸತಿಗೃಹಗಳ ಅಪಾರ್ಟ್‌ಮೆಂಟ್‌ನ್ನು ನಿರ್ವಹಿಸುವುದಕ್ಕಾಗಿ ಅಪಾರ್ಟ್‌ಮೆಂಟ್ ನಿವಾಸಿಗಳು ತಮಗಾಗಿಯೇ ಸೇವೆಯನ್ನು ಪಡೆಯುವುದಕ್ಕಾಗಿಯೇ ಐದು ಮಂದಿ ವ್ಯಕ್ತಿಗಳನ್ನು ಮಾತ್ರವೇ ನಿಯೋಜಿಸಿಕೊಂಡಿರುವುದು ಕಂಡುಬರುತ್ತದೆ. ಅಧಿನಿಯಮದ 2(i)ನೇ ಪ್ರಕರಣದಲ್ಲಿ ನಿರೂಪಿಸಿರುವಂತೆ ಕೆಲಸಗಾರ ಯಾವುದೇ ಕಾರ್ಯಸಂಸ್ಥೆಯ ಕೆಲಸದೊಂದಿಗೆ ಅಥವಾ ಆ ಸಂಬಂಧದಲ್ಲಿ ನಿಯೋಜಿತವಾಗಿರತಕ್ಕದ್ದು. ಆದರೆ, ಈ ಅಸೋಸಿಯೇಷನ್ ಅಧಿನಿಯಮದ ಅಡಿಯಲ್ಲಿ 'ಕಾರ್ಯಸಂಸ್ಥೆ' ಯ ವ್ಯಾಪ್ತಿಯೊಳಗೆ ಬರುವುದಿಲ್ಲ. ಈ ಅಸೋಸಿಯೇಷನ್ ನಿಯೋಜಿತ ವ್ಯಕ್ತಿಗಳು ಅಧಿನಿಯಮದ ಅಡಿಯಲ್ಲಿನ ಕೆಲಸಗಾರ ಸ್ವರೂಪದಲ್ಲಿಯೂ ಬರುವುದಿಲ್ಲ.

11. ಈ ಹಂತದಲ್ಲಿ, ಅಪೆಕ್ಸ್ ನ್ಯಾಯಾಲಯದಲ್ಲಿನ ದಾಖಲಾದ ***ಮ್ಯಾನೇಜ್‌ಮೆಂಟ್ ಆಫ್ ಸೋಮ್ ವಿಹಾರ್ ಅಪಾರ್ಟ್‌ಮೆಂಟ್ ಓನರ್ಸ್ ಹೌಸಿಂಗ್ ಮೇನ್‌ಟನನ್ಸ್ ಸೊಸೈಟಿ ಲಿಮಿಟೆಡ್ –ವಿರುದ್ಧ– ಕೆಲಸಗಾರ c/o ಇಂಡಿಯನ್ ಇಂಜಿನಿಯರಿಂಗ್ ಅಂಡ್ ಜನರಲ್ ಮಜ್ದೂರ್*** [1] ಮೊಕದ್ದಮೆಯಲ್ಲಿನ ತೀರ್ಪನ್ನು ಇಲ್ಲಿ ಉಲ್ಲೇಖಿಸುವುದು ಉತ್ತಮ. ಈ ತೀರ್ಪಿನಲ್ಲಿ ಅಪೆಕ್ಸ್ ನ್ಯಾಯಾಲಯವು ಅಪಾರ್ಟ್‌ಮೆಂಟ್‌ನ ವಸತಿಗೃಹಗಳ ಮಾಲೀಕರು ಅಪಾರ್ಟ್‌ಮೆಂಟ್ ಮಾಲೀಕರ ವಸತಿ ಸೊಸೈಟಿಯನ್ನು ರಚಿಸುವುದಕ್ಕೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 ಅನ್ನು ಅನ್ವಯಮಾಡಿಕೊಳ್ಳುವುದಕ್ಕೆ ಅದರಲ್ಲೂ ಸೊಸೈಟಿಯ ಸದಸ್ಯರಿಗೆ ವೈಯಕ್ತಿಕ ಸೇವೆಗಳನ್ನು ಒದಗಿಸುವ ಸಲುವಾಗಿ ನಿಯೋಜನೆಗೊಂಡ ನೌಕರರು ಮತ್ತು ಅಂಥ ನೌಕರರು ಸದಸ್ಯರುಗಳ ಸೇವೆಗಳಲ್ಲಿ ತೊಡಗಿಸಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರವೇ ಸೊಸೈಟಿಯನ್ನು ರಚಿಸಿಕೊಂಡಿರುತ್ತದೆ. ಅದರ ಚಟುವಟಿಕೆಗಳನ್ನು ಕೈಗಾರಿಕೆಯಂತೆ ಅದರ ಕೆಲಸಗಾರರಂತೆ ಪರಿಗಣಿಸತಕ್ಕದ್ದಲ್ಲ ಎಂದು ತಿಳಿಸಿರುತ್ತದೆ. ಈ ಸಂದರ್ಭದಲ್ಲಿ ಅಪಾರ್ಟ್‌ಮೆಂಟ್ ಓನರ್ಸ್ ಹೌಸಿಂಗ್ ಮೇನ್‌ಟೆನೆನ್ಸ್ ಸೊಸೈಟಿಯನ್ನು ಕೈಗಾರಿಕೆ ಎಂದು ತಿಳಿಯತಕ್ಕದಲ್ಲ ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುತ್ತದೆ. ಸದರಿ ನಿರ್ಣಯವನ್ನು ಅಪೆಕ್ಸ್ ನ್ಯಾಯಾಲಯದ ಸಂವಿಧಾನಿಕ ಪೀಠವು ***ಬೆಂಗಳೂರು ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ –ವಿರುದ್ಧ– ಆರ್. ರಾಜಪ್ಪ ಮತ್ತು ಇತರರು*** [2] ಮೊಕದ್ದಮೆಯಲ್ಲೂ ನೀಡಿದ ತೀರ್ಪಿನಲ್ಲಿ ಪರಿಗಣಿಸಿರುತ್ತದೆ. ಅದು ಗೃಹಕೃತ್ಯ ಸೇವೆಗಳ ಸೇವಕರಂತಹ ಸಣ್ಣ ವೃತ್ತಿಗಳಿಗೆ ವಿವೇಚನಾಯುಕ್ತವಾಗಿ ಅನ್ವಯಿಸಬಹುದಾದುದನ್ನೂ ಸಹ ಅಸೋಸಿಯೇಷನ್ ಅಥವಾ ಸೊಸೈಟಿಯೊಳಗಿನ ಅಸಂಘಟಿತವಲ್ಲದ, ಆದರೆ ನಿರ್ದಿಷ್ಟ ರೂಪದಲ್ಲಿ ಇರದ ಗುಂಪಾಗಿದ್ದರೆ ವಸತಿ ಗೃಹಗಳ ಮಾಲೀಕರ ಸಮೂಹವು ವೈಯಕ್ತಿಕ ಸೇವೆಗಳನ್ನು ಪಡೆಯುವುದಕ್ಕಾಗಿ ಅವರನ್ನು ತೊಡಗಿಸಿಕೊಂಡಾಗಲೂ ಅನ್ವಯಿಸುವುದು. ಅಪೆಕ್ಸ್ ನ್ಯಾಯಾಲಯವು **'ಮ್ಯಾನೇಜ್‌ಮೆಂಟ್ ಆಫ್ ಸೋಮ್ ವಿಹಾರ್** ***ಅಪಾರ್ಟ್‌ಮೆಂಟ್ ಓನರ್ಸ್ ಹೌಸಿಂಗ್ ಮೇನ್‌ಟನನ್ಸ್ ಸೊಸೈಟಿ ಲಿಮಿಟೆಡ್***

1. 2001 (1) ಎಲ್‌ಎಲ್‌ಜೆ 1413 2. ಎಐಆರ್ 1978 ಎಸ್‌ಸಿ 548

ಮೊಕದ್ದಮೆಯಲ್ಲಿ ಗೃಹಕೃತ್ಯ ಸೇವಕರು ಒಬ್ಬ ಅಥವಾ ಹಲವು ಒಡೆಯರ ಸಂಬಂಧದಲ್ಲಿ ಅವರು ಕೆಲಸವನ್ನು ಮಾಡಬೇಕಾಗಿರುವಾಗ ಅವರನ್ನು ಕೆಲಸಗಾರರಂತೆ ಪರಿಗಣಿಸಬೇಕಾದ ಪ್ರಸ್ತಾವವನ್ನು ಈ ನ್ಯಾಯಾಲಯವು ನಿರಾಕರಿಸುತ್ತದೆ ಎಂದು ನಿರ್ಣಯಿಸಿರುತ್ತದೆ. ಈ ನಿರ್ಣಯವು ಪ್ರಸ್ತುತ ಮೊಕದ್ದಮೆಯ ಸಂಗತಿಗಳಿಗೆ ಪೂರ್ಣ ಪ್ರಮಾಣದಲ್ಲಿ ಅನ್ವಯವಾಗುತ್ತದೆ. ಅಪಾರ್ಟ್‌ಮೆಂಟ್ ಮಾಲೀಕರ ಅಸೋಸಿಯೇಷನ್. ತನ್ನ ಸದಸ್ಯರ ಅನುಕೂಲತೆಗಾಗಿ ಈ ಅಸೋಸಿಯೇಷನ್ ಅನ್ನು ಸೃಜಿಸಿಕೊಂಡಿರುತ್ತದೆ ಮತ್ತು ಅಸೋಸಿಯೇಷನ್ ಈಗಾಗಲೇ ನಿಯೋಜಿಸಿಕೊಂಡ ಕೆಲಸಗಾರರೆಂದು ಕರೆಯಲಾಗುವ ವ್ಯಕ್ತಿಗಳ ಸೇವೆಯನ್ನು ಅಸೋಸಿಯೇಷನ್ ಸದಸ್ಯರುಗಳ ವೈಯಕ್ತಿಕ ಸೇವೆಗಳಿಗೆ ಮಾತ್ರವೇ ಪಡೆದುಕೊಂಡಿರುತ್ತದೆ. ಮೇಲೆ ಹೇಳಿದಂತೆ, ಈ ಅಧಿನಿಯಮದ ಉಪಬಂಧಗಳು ಅನ್ವಯವಾಗುವುದನ್ನು, ಅಧಿನಿಯಮದ 2(i) ಪ್ರಕರಣದಲ್ಲಿ ಹೇಳಲಾದ 'ಕಾರ್ಯಸಂಸ್ಥೆ' ಯಲ್ಲಿನ ಅವಶ್ಯಕ ಘಟಕಾಂಶಗಳು ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದ ಕಚೇರಿ ಅಥವಾ ಇಲಾಖೆ ನಡೆಸುವ ವಾಣಿಜ್ಯ ಸ್ವರೂಪದ ಉದ್ದೇಶಿತ ಚಟುವಟಿಕೆಗಳನ್ನು ಪೂರೈಸುವಂತಿರಬೇಕು. ಆದರೆ ಇಲ್ಲಿ ಅಂತಹ ಆ ಯಾವುದೇ ಚಟುವಟಿಕೆಗಳ ಪೂರೈಕೆಯ ಗೈರುಹಾಜರಿಯಲ್ಲಿ ಪ್ರತ್ಯರ್ಜಿದಾರರು ಅಧಿನಿಯಮದ ಅಡಿಯಲ್ಲಿ ನಿಯಮಿಸಿದ ಕಾರ್ಯವಿಧಾನ ಪಾಲನೆಗಾಗಿ ನಿರ್ದೇಶಿಸಿರುವುದು ಸಂಪೂರ್ಣವಾಗಿ ಅಸಮರ್ಥನೀಯವಾದುದಾಗಿದೆ.

12. ಅರ್ಜಿದಾರರು, ಕರ್ನಾಟಕ ಮಾರಾಟ ಮಳಿಗೆಗಳ ಮತ್ತು ವಾಣಿಜ್ಯ ಸಂಸ್ಥೆಗಳ ಅಧಿನಿಯಮ, 1961 ರ ಅಡಿಯಲ್ಲಿ ಪಡೆದುಕೊಂಡ ನೋಂದಣಿಯು ತಪ್ಪಿನ ಪರಿಕಲ್ಪನೆಯಾಗಿರುತ್ತದೆ ಮತ್ತು ನೊಂದಣಿಯನ್ನು ನವೀಕರಿಸಬೇಕಾಗಿಲ್ಲ, ನವೀಕರಿಸುವ ಹಕ್ಕು ಇರುವುದಿಲ್ಲ. ಪ್ರತ್ಯರ್ಜಿದಾರರು, ಮ್ಯಾಜಿಸ್ಟ್ರೇಟರ ಮುಂದೆ ಅರ್ಜಿದಾರರ ಅಸೋಸಿಯೇಷನ್ ಮೇಲೆ ಕೆಲವು ಕ್ಷುಲ್ಲಕ ಕಾರಣಗಳಿಂದ ಕ್ರಿಮಿನಲ್ ದೂರನ್ನು ದಾಖಲಿಸಿರುವುದು ಕಿರುಕುಳವೆಂದು ಪರಿಗಣಿಸಬೇಕಾಗುತ್ತದೆ.

13. ಪ್ರತ್ಯರ್ಜಿದಾರ ವಿವೇಚನೆಯಿಲ್ಲದೆ ಸ್ವೇಚ್ಛಾಚಾರವಾಗಿ ನಡೆದುಕೊಂಡಿರುವುದು ಕಂಡುಬರುತ್ತದೆ. ಪ್ರತ್ಯರ್ಜಿದಾರನ ಕ್ರಮವು ಸಂಪೂರ್ಣವಾಗಿ ಅಧಿಕಾರವ್ಯಾಪ್ತಿಯನ್ನು ಮೀರಿದುದಾಗಿರುತ್ತದೆ. ಅಧಿಕಾರವ್ಯಾಪ್ತಿ ಹೊಂದಿರದ ಪ್ರಾಧಿಕಾರಗಳು ಹೊರಡಿಸಿದ ಯಾವುದೇ ಆದೇಶಗಳು ಮೊದಲಿನಿಂದಲೂ ಅನೂರ್ಜಿತವಾಗಿವೆ ಮತ್ತು ಅವನ್ನು ವಜಾಮಾಡುವುದು ಅಗತ್ಯವಾಗಿದೆ.

14. ಮ್ಯಾಜಿಸ್ಟ್ರೇಟರು, ಪ್ರತ್ಯರ್ಜಿದಾರರು ದಾಖಲಿಸಿದ ದೂರನ್ನು ವಿವೇಚಿಸದೇ ಸಂಜ್ಞಾನಕ್ಕೆ ತೆಗೆದುಕೊಂಡು ಉದಾಸೀನ ಸ್ವರೂಪದಲ್ಲಿ ಈ ವ್ಯವಹರಣೆಗಳನ್ನು ಪ್ರಾರಂಭಿಸಿರುವುದು ಕಂಡುಬರುತ್ತದೆ. ಮ್ಯಾಜಿಸ್ಟ್ರೇಟರು, ಆಪಾದಿತರ ವಿರುದ್ಧ ಕ್ರಿಮಿನಲ್ ವ್ಯವಹರಣೆಗಳನ್ನು ಪ್ರಾರಂಭಿಸುವ ಮುಂಚೆ ಮೊಕದ್ದಮೆಯಲ್ಲಿ ಮೇಲ್ನೋಟಕ್ಕೆ ಕಂಡುಬರುವ ದೂರನ್ನು ಮನವರಿಕೆ ಮಾಡಿಕೊಳ್ಳಲು ಸ್ವತಃ ತಾವೆ ಪರಿಶೀಲಿಸುವುದು ಅತ್ಯಗತ್ಯವಾಗಿರತಕ್ಕದ್ದು. ಮ್ಯಾಜಿಸ್ಟ್ರೇಟರು ಪ್ರಾರಂಭಿಸಿದ ವ್ಯವಹರಣೆಗಳು ಮುಂದುವರೆಸದಿರಲು ಈ ನ್ಯಾಯಾಲಯವು ಮಧ್ಯ ಪ್ರವೇಶಿಸಿ ಮ್ಯಾಜಿಸ್ಟ್ರೇಟರ ವ್ಯವಹರಣೆಗಳನ್ನು ತಡೆಯುತ್ತದೆ.

15. ಈ ಮೇಲಿನ ಎಲ್ಲಾ ಕಾರಣಗಳಿಗಾಗಿ ರಿಟ್ ಅರ್ಜಿಯನ್ನು ಪುರಸ್ಕರಿಸಲಾಗಿದೆ. ದಿನಾಂಕ 21.07.2012 ರಂದು ಅನುಬಂಧ–ಎಫ್ ನಲ್ಲಿನ ಕ್ರಿಮಿನಲ್ ದೂರನ್ನು ಮತ್ತು ಸಿಸಿ ಸಂ.1961/2012 ರಲ್ಲಿ ಎಂಎಂಟಿಸಿ–3 ಬೆಂಗಳೂರಿನಲ್ಲಿನ ಕಡತದ ಮೇಲಿನ ಅನಂತರದ ವ್ಯವಹರಣೆಗಳನ್ನು ಈ ಮೂಲಕ ರದ್ದುಗೊಳಿಸಿದೆ. ವೆಚ್ಚಗಳು ಇಲ್ಲ.

---